ಬೆಂಗಳೂರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರೆಸ್ಟ್ ಯೂನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ನಾದರ್ಮಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮಕ್ಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಫಾಯಿಷಾಗಿರುವ ಅದೇ ಇಸವಿ ಜನವರಿ 23ನೇ ಮಕ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರ್‌ಗಳ ನಡವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್‌ದಾರ್‌ರೇಆಗಲಿ ಅವರ ಗೈರಹಾಜರಿಯಲ್ಲಿ ಶಿರಸ್ತಾರ್‌ರೇಆಗಲಿ ಈ ಬಗ್ಯೆ ಡೆಪ್ಯೂಟಿ ಕಮ್ಮಿಷನರವರಿಂದ ಗೊತ್ತುಮಾಡುವ ಸ್ಥಳಗಳಲ್ಲಿ ಫಸಲನ್ನು ಹರಾಜು ಮಾಡುವರು. ಕಾರ್ತೀಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖೀ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್‌ದಾರ್‌ರು ಪ್ರಕಟಿಸುತ್ತಾರೆ. ಇನ್ನೊಂದು ಹುಕುಂ ಕೊಡುವವರಿವಿಗೂ ಕ್ಲೋಸ್‌ಪೇಟೆ ಸಬ್ ಡಿವಿಜನಿನಲ್ಲಿ ಈ ಕೆಳಗೆ ನಮೂದುಮಾಡಿರುವ ಸ್ಥಳಗಳಲ್ಲಿ ಹರಾಜ್ ಮಾಡಲ್ಪಡುತ್ತೆ.

(3) ಹರಾಜು ಷರತ್ತುಗಳೇನಂದರೆ:—

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ಮಾಡುವದಿಲ್ಲ.

(b) ಆಖ್ಯೆರ್ ಚಡಸವಾಲ್ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟು ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ಮತ್ತು ರೂಪಾಯಿ 1ಕ್ಕೆ ಬಂದಾಣಿ ಮೇರೆಗೆ ಆಗುವ ಲೋಕಲ್ ಸೆಸ್ಸನ್ನೂ ಸಹ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟ್ಟನ್ನ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜ್ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನ ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖೀ ಫಸಲನ್ನು ಜೂ 1ನೇ ತಾರೀಖು ಲಾಗಾಯತು ಡಿಸೆಂಬರು 31ರ ವರಿಗೂ, ಕಾರ್ತೀಕ ಫಸಲನ್ನು ಜನವರಿ 1ನೇ ತಾರೀಖು ಲಾಗಾಯತು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ತಾಲ್ಲೂಕು.	ತಾಲ್ಲೂಕಿನಲ್ಲಿ ಹರಾಜ್ ಮಾಡುವ ಸ್ಥಳ.
ಚನ್ನಪಟ್ಟಣ ..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು ಮರವಳಿ (ಜಂಗಲಿ ಪಸಾರೆ ಚನ್ನಪಟ್ಟಣದ ಕಸಬೆಯಲ್ಲಿ ಮಾತ್ರ) ಹರಾಜ್‌ಮಾಡಲ್ಪಡುತ್ತೆ)
ಕಾರ್ಕಾನಹಳ್ಳಿ ..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಮಾಗಡಿ ..	ಮಾಗಡಿ ತಾವರೆಕೆರೆ, ಸೋಲೂರು, ಕುದೂರು ಮೊಕ್ಕಾಂಗಳಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಕ್ಲೋಸ್‌ಪೇಟೆ ..	ಬಿಡದಿ ಮತ್ತು ಕ್ಲೋಸ್‌ಪೇಟೆಯಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)

ಬಿ. ಈಪ್ಪಸಾಮಿನಾಯಡು,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫಿಸಿನಿಂದ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ವೆಸ್ಟ್ ಎಕ್ಸ್‌ಟೆರ್ಷನ್ ಮಹಮರ್ಡ್ ಕಮ್ಯೂನಿಟೀಗೆ ಸೇರಿದ ಈ ಕೆಳಗೆ ನಮೂದಿಸುವ ಅಳತೆಗಳುಳ್ಳ 10 ಪತ್ತು ತಾಕುಗಳು ಚಾಲತಿ ಇಸವಿ ಆಗಸ್ಟ್ 8ನೇ ತಾರೀಖು ಪ್ರಾತಃಕಾಲ 7½ ಘಂಟೆಗೆ ಡಿಟೋ ಜಾಗಾದ ಬಯಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು:—